ಮಂಗಳ ವಾದ್ಯಗಳು ಭೋರ್ಗರೆದವು. ಬಾಣ ಬಿರುಸುಗಳ ಸುರಿಮಳೆಯಾಯಿತು. ಸುಮುಹೂರ್ತದಲ್ಲಿ ಮಂತ್ರಘೋಷಗಳು ಮೊಳಗುತ್ತಿದ್ದಂತೆ ರಾಜಕುಮಾರನು ವಧುವಿನ ಕೊರಳಿಗೆ ಮಾಂಗಲ್ಯವನ್ನು ತೊಡಿಸಿದನು. ನೆರೆದ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಎಲ್ಲರೂ ರಾಜಕುಮಾರನ ಅದೃಷ್ಟವನ್ನು ಕೊಂಡಾಡುವವರೇ. ಇವಳ್ಯಾರು ಅಪ್ಸರೆಯೋ ಈ ವನದೇವತೆಯೋ ಎಂದು ಅವಳನ್ನೇ ಕಣ್ಣು ಬಾಯಿಬಿಟ್ಟುಕೊಂಡು ನೋಡುತ್ತ ಪ್ರತಿಮೆಗಳಾಗಿ ಬಿಟ್ಟರು.

ಮಹಾರಾಜನಿಗಾದ ಸಂತೋಷ ಅಷ್ಟಿಷ್ಟಲ್ಲ. ಮಗನಿಂದ ಅವಳ ಕತೆಯನ್ನು ಕೇಳಿ ಮರುಕಪಟ್ಟು ಕೂಡಲೇ ಅವರ ರಾಜ್ಯಕ್ಕೆ ಸುದ್ದಿ ಮುಟ್ಟಿಸಿ ರಾಜರಾಣಿಯರನ್ನು ಕರೆಸಿಕೊಂಡನು. ತಮ್ಮ ಮುದ್ದು ಮಗಳು ಏನಾದಳೋ ಎಂದು ಹಗಲಿರುಳು ಹಂಬಲಿಸಿ ಕಂಗೆಟ್ಟಿದ್ದ ರಾಜ ರಾಣಿಗೆ ಮಗಳು ಮತ್ತೊಮ್ಮೆ ಹುಟ್ಟಿ ಬಂದಷ್ಟು ಸಂತೋಷವಾಯಿತು. ಅರಮನೆಯಲ್ಲಿ ಸಂಭ್ರಮವೋ ಸಂಭ್ರಮ. ಎಲ್ಲರೂ ತುಂಬಿದ ಹೃದಯದಿಂದ ವಧೂವರರನ್ನು ಆಶೀರ್ವದಿಸಿ ಊಟೋಪಚಾರ ಉಡುಗೊರೆಗಳನ್ನು ಪಡೆದು ಹರ್ಷಚಿತ್ತರಾಗಿ ತೆರಳಿದರು.

ಈ ವೈಭವವನ್ನು ಕಂಡ ಮಂತ್ರಿ ಕುಮಾರನಿಗೆ ತಾನೂ ಹೀಗೆ ಮದುವೆಯಾಗಬೇಕು ಎನಿಸಿತು. ಅವನು ಅಷ್ಟು ಬುದ್ಧಿವಂತನಲ್ಲ. ತಂದೆಯ ಬಳಿಗೆ ಹೋಗಿ 'ಅಪ್ಪಾ ನಾನು ನನ್ನ ತೋಟದ ಹುಣಿಸೇ ಗಿಡವನ್ನು ಮದುವೆಯಾಗುತ್ತೇನೆ' ಎಂದನು. ಮಂತ್ರಿ ನಕ್ಕು 'ಹುಲಿಯನ್ನು ನೋಡಿ ನರಿ ಬರೆ ಹಾಕಿಕೊಂಡ ಸಮಾಚಾರವಾಯಿತು ಇದು. ರಾಜಕುಮಾರನ ಅದೃಷ್ಟದಿಂದ ಆ ಹುಡುಗಿ ಬಂದು ಬಾಳೆಗಿಡದಲ್ಲಿ ಅಡಗಿದ್ದಳು. ಅದನ್ನು ತಿಳಿದೇ ಧೈರ್ಯವಾಗಿ ಮದುವೆಯಾದ. ನಿನಗೆ ಹುಣಿಸೇ ಮರದಲ್ಲಿ ಯಾರಿದ್ದಾರೆ? ದೆವ್ವ ಪಿಶಾಚಿಗಳಿರುತ್ತೆ ಅಷ್ಟೆ. ಸುಮ್ಮನೆ ದಡ್ಡನಂತಾಡಬೇಡ ಸರಿಯಾದ ಸಂಬಂಧ ನೋಡಿ ನಿನಗೆ ಮದುವೆ ಮಾಡೋಣ' ಎಂದ. ಆದರೆ ಮೂರ್ಖರಿಗೆ ಹೇಳುವ ಬುದ್ಧಿವಾದ ಗೋರ್ಗಲ್ಲ ಮೇಲೆ ಮಳೆಗರೆದಂತೆ ತಾನೆ? ಮಂತ್ರಿಕುಮಾರನದು ಒಂದೇ ಹಟ. 'ಸರಿ ನಿನ್ನ ಹಣೆಬರಹ' ಎಂದು ಮಂತ್ರಿ ಸುಮ್ಮನಾದ.

ಮದುವೆ ಏರ್ಪಾಡಾಗಿ ಕರೆಯೋಲೆ ಎಲ್ಲರ ಕೈ ಸೇರಿತು. ಜನ ಇನ್ನೊಂದು ಕೌತುಕವನ್ನು ನೋಡಲು ಸಂಭ್ರಮದಿಂದ ನೆರೆದರು. ಎಲ್ಲಾ ರಾಜಕುಮಾರನ ಮದುವೆಯಂತೆಯೇ ನಡೆದು ಮಂತ್ರಿ ಕುಮಾರ ಕೈಯಲ್ಲಿ ತಾಳಿಸರ ಹಿಡಿದು 'ಹುಣಸೇ ಮರದ ಚೆಲುವೆ ಹಸೆಮಣೆಗೆ ಬಾ' ಎಂದು ಗಟ್ಟಿಯಾಗಿ ಅರಚಿದ. ಹುಣಸೇ ಮರ ಛಟ ಛಟ ಸೀಳಿ ಎರಡು ಭಾಗವಾಯಿತು. ಒಳಗಿಂದ ತಲೆ ಕೆದರಿದ ವಿಕಾರ ರೂಪಿನ ಪಿಶಾಚಿಯೊಂದು ಕೋರೆ ಹಲ್ಲನ್ನು ಚಾಚುತ್ತಾ ಒಂದು ಕೈಯಲ್ಲಿ ಸಗಣಿ ಬಗ್ಗಡ ತುಂಬಿದ ಪಾತ್ರೆ, ಇನ್ನೊಂದು ಕೈಯಲ್ಲಿ ಮೊಂಡು ಪೊರಕೆಯನ್ನು ಹಿಡಿದುಕೊಂಡು ಈಚೆಗೆ ಬಂದು ಕೇಕೆ ಹಾಕುತ್ತ, ಪೊರಕೆಯನ್ನು ಬಗ್ಗಡದಲ್ಲಿ ಅದ್ದಿ ಅದ್ದಿ ನೆರೆದ ಜನರ ಮೇಲೆ ಸಗಣಿ ನೀರನ್ನು ಎರಚತೊಡಗಿತು. ಜನ ಹೆದರಿ ಕಂಗಾಲಾಗಿ ಮಂತ್ರಿಮಗನನ್ನು ಶಪಿಸುತ್ತಾ ಸತ್ತೆನೋ ಕೆಟ್ಟೆನೋ ಎಂದು ಚೆಲ್ಲಾಪಿಲ್ಲಿಯಾಗಿ ಅಲ್ಲಿಂದ ಓಡತೊಡಗಿದರು. ಈ ಮೊದ್ದು ಮಗನ ಕಾರ್ಯದಿಂದ ಅವಮಾನಿತನಾದ ಆ ಮಂತ್ರಿ ಆ ರಾಜ್ಯವನ್ನು ಬಿಟ್ಟು ಎಲ್ಲಿಗೋ ಹೊರಟು ಹೋದ.